VK ವಿಜಯ ಕರ್ನಾಟಕ Namma Karavali Mangalore Edition, 29.08.2021 Edited by: Mahesh Pattaje

# ಹಳ್ಳಿಹೊಳೆ ಆ. ಕೇಂದ್ರ ಸೋಲಾರ್‌ಮಯ!

## ರಾಜ್ಯದಲ್ಲೇ ಮಾದರಿಯಾದ ಅರಣ್ಯದಂಚಿನ ಕೇಂದ್ರ | ಸೆಲ್ಕೊ ಇಂಡಿಯಾ ಪ್ರಾಜೆಕ್ಟ್

■ **ಜಾನ್ ಡಿಸೋಜ** ಕುಂದಾಪುರ
john.dsouza@timesgroup.com

ದಟ್ಟಾರಣ್ಯದಿಂದ ಕೂಡಿದ ಪ್ರದೇಶ. ವಿದ್ಯುತ್ ಯಾವಾಗ ಕೈ ಕೊಡುತ್ತದೆ ಹೇಳಲು ಸಾಧ್ಯವಿಲ್ಲ, ವಿದ್ಯುತ್ ಇಲ್ಲದಿದ್ದರೆ ಕೆಲಸ ಕಾರ್ಯಗಳಿಗೆ ಅಡಚಣೆ. ಇಲ್ಲೀಗ ಈ ಎಲ್ಲ ಅಡಚಣೆಗೆ ಬ್ರೇಕ್ ಬಿದ್ದಿದೆ. ದಿನದ 24 ಗಂಟೆಯೂ ಜನಸೇವೆ ಮಾಡುವ ಹುಮ್ಮಸ್ಸು ಮೂಡಿದೆ.

-ಇದು ಕುಂದಾಪುರ ತಾಲೂಕಿನ ಹಳ್ಳಿಹೊಳೆ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ವ್ಯವಸ್ಥೆ.

ಈ ಪ್ರಾಥಮಿಕ ಆರೋಗ್ಯ ಕೇಂದ್ರ ವಿದ್ಯುತ್‌ಗೆ ಪರ್ಯಾಯವಾಗಿ ಸೋಲಾರ್ ಬೆಳಕಿನಲ್ಲಿ ಮುನ್ನಡೆಯುತ್ತಿದೆ. ದುರ್ಗಮ ಅರಣ್ಯಗಳಿಂದ ಕೂಡಿದ ಗ್ರಾಮೀಣ ಪ್ರದೇಶದ ಆರೋಗ್ಯ ಸೇವೆ ಸ್ಥಳೀಯರಿಗೆ ನಿತ್ಯ ಸಿಗುವಂತಾಗಿದೆ.

**4 ಲಕ್ಷ ರೂ.** ವೆಚ್ಚದಲ್ಲಿ 5 ಕೆವಿ ಸೋಲಾರ್ ಪ್ಯಾನಲ್ ಅಳವಡಿಕೆ

**ಸೆಲ್ಕೊ ಇಂಡಿಯಾ ಪ್ರಾಜೆಕ್ಟ್:** ಗ್ರಾಮೀಣ ಮತ್ತು ಬುಡಕಟ್ಟು ಜನ ನೆಲೆಸಿರುವ ವಿದ್ಯುತ್ ವಂಚಿತ ಪ್ರದೇಶಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಸೋಲಾರ್ ವ್ಯವಸ್ಥೆ ಅಳವಡಿಸಲು ಮುಂದಾಗಿರುವ ಸೆಲ್ಕೋ ಇಂಡಿಯಾ ಆರೋಗ್ಯ ಕೇಂದ್ರಗಳಿಗೆ ಬೆಳಕು ನೀಡುವ ಯೋಜನೆಯಡಿ ಹಳ್ಳಿಹೊಳೆಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಆಯ್ದುಕೊಂಡಿತ್ತು. 4 ಸಾವಿರ ಜನಸಂಖ್ಯೆ ಇರುವ ಶೇ.80ರಷ್ಟು ಕಾಡನ್ನೇ ಹೊಂದಿರುವ ಇಲ್ಲಿನ ಆರೋಗ್ಯ ಕೇಂದ್ರ ಜನರ ಪಾಲಿಗೆ ಸಂಜೀವಿನಿ ಇದ್ದಂತೆ. ಜನರ ಆರೋಗ್ಯ ಸೇವೆಗೆ ತೊಡಕಾಗದಂತೆ ಕೇಂದ್ರವನ್ನು ಸೋಲಾರ್ ಬೆಳಕಿನಡಿ ತರಲು 2 ಲಕ್ಷ ರೂ. ದೇಣಿಗೆ ನೀಡಿತ್ತು.

ಕುಂದಾಪುರ ಲಯನ್ಸ್ ಕ್ಲಬ್ 1 ಲಕ್ಷ ರೂ., ಕಮಲಶಿಲೆ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಳದಿಂದ 1 ಲಕ್ಷ ರೂ. ದೇಣಿಗೆ ಪಡೆದು ಒಟ್ಟು 4 ಲಕ್ಷ ರೂ. ವೆಚ್ಚದಲ್ಲಿ ಪೂರ್ಣ ಪ್ರಮಾಣದಲ್ಲಿ 5 ಕೆವಿ ಸೋಲಾರ್ ಪ್ಯಾನಲ್ ಅಳವಡಿಸಲಾಗಿದೆ. 5 ತಿಂಗಳಿನಿಂದ ಕಾರ್ಯಾಚರಿಸುತ್ತಿರುವ ಸೋಲಾರ್ ವ್ಯವಸ್ಥೆಯಿಂದ ಇಡೀ ಕೇಂದ್ರ ದಿನದ 24 ಗಂಟೆಯೂ ಬೆಳಗುವಂತಾಗಿದೆ. ಕೋಲ್ಡ್ ಸ್ಟೋರೇಜ್, ಫಾರ್ಮಸಿ, ಲ್ಯಾಬ್ ಸಹಿತ ಕೇಂದ್ರದ ಎಲ್ಲ ವೈದ್ಯಕೀಯ ವಿಭಾಗಕ್ಕೂ ಸೋಲಾರ್ ನೆರವಾಗಿದೆ. ಪ್ರತಿ ತಿಂಗಳು ಮಾಸಿಕ 6 ಸಾವಿರ ರೂ. ಮೇಲ್ಪಟ್ಟು ವಿದ್ಯುತ್ ಬಿಲ್ ಬರುತ್ತಿದ್ದ ಕೇಂದ್ರದಲ್ಲೀಗ ಬೇಸಿಕ್ ಬಿಲ್ ಪಾವತಿಸುವಂತಾಗಿದೆ.



ಗುಡ್ಡಗಾಡು ಮತ್ತು ಅರಣ್ಯ ತಪ್ಪಲು ಪ್ರದೇಶದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೋಲಾರ್ ಅಳವಡಿಸುವ ಕಾರ್ಯ ಸೆಲ್ಕೊ ಫೌಂಡೇಶನ್‌ನಿಂದ ನಡೆಯುತ್ತಿದೆ. ರಾಜ್ಯದ 150 ಕಡೆಗಳಲ್ಲಿ ನಡೆದಿದೆ. ಕುಂದಾಪುರ ತಾಲೂಕಿನ ಹಳ್ಳಿಹೊಳೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪೂರ್ಣ ಪ್ರಮಾಣದ ಸೋಲಾರ್ ಅಳವಡಿಸಲಾಗಿದೆ.

**-ಶೇಖರ ಶೆಟ್ಟಿ**
ವ್ಯವಸ್ಥಾಪಕರು, ಸೆಲ್ಕೊ ಫೌಂಡೇಶನ್

ಅರಣ್ಯ ಪ್ರದೇಶವಾಗಿರುವುದರಿಂದ ವಿದ್ಯುತ್ ವ್ಯತ್ಯಯ ಹೆಚ್ಚು. ಇದನ್ನು ಮನಗಂಡು ಸೆಲ್ಕೊ ಇಂಡಿಯಾದ ಗಮನ ಸೆಳೆದಾಗ ಅವರು ಕೇಂದ್ರವನ್ನು ಪೂರ್ಣ ಪ್ರಮಾಣದಲ್ಲಿ ಸೋಲಾರ್‌ಮಯವಾಗಿಸಿದ್ದಾರೆ. ಕಮಲಶಿಲೆ ದೇವಳ, ಲಯನ್ಸ್ ಕ್ಲಬ್ ಕುಂದಾಪುರ ಸಹಕರಿಸಿದೆ. ರಾಜ್ಯದಲ್ಲೇ ಇದೊಂದು ಮಾದರಿ ಸೋಲಾರ್ ಪ್ರಾಥಮಿಕ ಆರೋಗ್ಯ ಕೇಂದ್ರ. ಸೋಲಾರ್‌ನಿಂದ ಶೇ.100ರಷ್ಟು ಅನುಕೂಲತೆಯಾಗಿದೆ.

**-ಡಾ.ನಾಗಭೂಷಣ ಉಡುಪ,** ಜಿಲ್ಲಾ ಆರೋಗ್ಯಾಧಿಕಾರಿ

ಯಾವಾಗಲೂ ಇಲ್ಲಿ ವಿದ್ಯುತ್ ಕಡಿತ ಆಗುತ್ತಿರುತ್ತದೆ. ಸೋಲಾರ್ ಅಳವಡಿಸಿದ ನಂತರ ಎಲ್ಲ ಸಮಸ್ಯೆಗಳು ದೂರವಾಗಿದೆ. ಕೇಂದ್ರದ ಎಲ್ಲ ವೈದ್ಯಕೀಯ ವಿಭಾಗಕ್ಕೂ ದಿನದ 24 ಗಂಟೆಯೂ ಬೆಳಕು ಸಿಗುತ್ತಿದೆ. ಸಿಬ್ಬಂದಿಯ ಕೆಲಸ ಕಾರ್ಯಗಳಿಗೆ, ಕೋವಿಡ್ ವ್ಯಾಕ್ಸಿನೇಶನ್‌ಗೂ ಅನುಕೂಲವಾಗಿದೆ. ಮುಖ್ಯವಾಗಿ ವಿದ್ಯುತ್ ಉಳಿತಾಯ ಆಗುತ್ತಿದೆ. 6 ಸಾವಿರ ರೂ.ಗೂ ಮೇಲ್ಪಟ್ಟು ವಿದ್ಯುತ್ ಬಿಲ್ ಬರುತ್ತಿರುವಲ್ಲಿ ಈಗ 1 ಸಾವಿರ ರೂ. ಬಿಲ್ ಬರುತ್ತಿದೆ. ರೋಗಿಗಳಿಗೆ ತುರ್ತು ಸೇವೆ ನೀಡಲು ದಿನದ 24 ಗಂಟೆಯೂ ಸೋಲಾರ್ ಆಧಾರವಾಗಿದೆ.

**-ಡಾ.ಶ್ರಾವ್ಯ,** ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಳ್ಳಿಹೊಳೆ